## ನನ್ನ ಓದು

ರಾಮಾಯಣದ ಕುರಿತಾಗಿ ನಮ್ಮ ನಡುವೆ ಹಲವು ಕಥನಗಳಿವೆ. ಪ್ರಾಚೀನ ಕೃತಿಗಳ ಜೊತೆಗೆ ಕುವೆಂಪು ಅವರ 'ಶ್ರೀ ರಾಮಾಯಣದರ್ಶನಂ', ಎಚ್.ವಿ. ಸಾವಿತ್ರಮ್ಮ ಅವರ 'ಸೀತೆ-ರಾಮ-ರಾವಣ', ದು. ಸರಸ್ವತಿಯವರ 'ಸಣ್ತಿಮ್ಮಿ ಪುರಾಣ' ಹಲವು ದನಿಗಳನ್ನು ಮುನ್ನೆಲೆಗೆ ತಂದಿವೆ. ಇವೆಲ್ಲವುಗಳ ನೆನಪಿಸುವ 'ಭರತ ಕಲ್ಪ', ಇದುವರೆಗಿನ ನಮ್ಮ ರಾಮಾಯಣದ ಓದನ್ನು, ರಾಮಾಯಣದ ಕುರಿತಾದ ಅರಿವನ್ನು ವಿಸ್ತರಿಸುವ ರೀತಿಯಲ್ಲಿದೆ.

ಇಡೀ ರಾಮಾಯಣ ಹೆಣ್ಣಿನ ಕಾರಣದಿಂದ ಸಂಭವಿಸಿತು ಎಂಬ ಜನಪ್ರಿಯ ಮಾತಿದೆ. ಕೈಕೇಯಿಯ ದೆಸೆಯಿಂದಾಗಿ, ರಾಮ ರಾಜನಾಗದೇ ವನವಾಸಕ್ಕೆ ಹೋಗಬೇಕಾಗಿ ಬಂದರೆ ಸೀತೆಯಿಂದಾಗಿ ಲಂಕಾ ಯುದ್ಧ ನಡೆಯಿತು ಎಂಬ ಮಾತನ್ನು ಎಲ್ಲ ಕಡೆ ಕೇಳುತ್ತೇವೆ. ಹೀಗೆ ಮಹಿಳೆಯರ ಅಪರಾಧೀಕರಣ, ಹಲವು ಬಾರಿ ಪುರಾಣ ಮತ್ತು ಚರಿತ್ರೆಗಳಲ್ಲಿ ನಡೆದಿದೆ. ಚರಿತ್ರೆ, ಪುರಾಣಗಳ ಏಕಮುಖಿ ಅರ್ಥೈಸಿಕೊಳ್ಳುವಿಕೆ ಅವುಗಳ ಮಧ್ಯದ ಹಲವು ಖಾಲಿ ಜಾಗಗಳ ಕಡೆಗೆ ನಾವು ನೋಟ ಹರಿಸದಂತೆ ಮಾಡಿದೆ. ನಮ್ಮ ಪುರಾಣ, ಚರಿತ್ರೆಗಳು ಪುರುಷರು ಕಟ್ಟಿದ ಕಥೆಗಳಾಗಿವೆ. ಅದಕ್ಕೇ ಅವರು ಕಟ್ಟಿದ ಚರಿತ್ರೆ ಮಾತ್ರ ಅಲ್ಲ, ಪುರಾಣಗಳಲ್ಲೂ ಹೆಣ್ಣಿಗೆ ಜಾಗವಿಲ್ಲ. ಇದ್ದರೂ ನಕಾರಾತ್ಮಕವಾಗಿ ಆಕೆ ಕಾಣುತ್ತಾಳೆ. ಇದರ ಮಧ್ಯೆ ನಮ್ಮದೇ ಆದ ಚರಿತ್ರೆ, ಪುರಾಣಗಳನ್ನು ನಾವು ಕಟ್ಟಿಕೊಳ್ಳಬೇಕು, ಮರೆವಿಗೆ ಸಂದವುಗಳನ್ನು ಹುಡುಕಿ ಮುನ್ನೆಲೆಗೆ ತರಬೇಕಾದ ಅಗತ್ಯವಿದೆ. 'ಭರತ ಕಲ್ಪ' ಕೃತಿಯನ್ನು ಈ ಹಿನ್ನೆಲೆಯಲ್ಲಿ ನೋಡಿದಾಗ ಕೇವಲ ಹೆಣ್ಣುಮಕ್ಕಳು ಮಾತ್ರ ಅಲ್ಲ, ನಿರ್ಲಕ್ಷ್ಯಕ್ಕೆ ಒಳಗಾದ ಅನೇಕ ದನಿಗಳನ್ನು ಕೇಳಿಸುವ ಕೆಲಸ ಮಾಡುತ್ತದೆ.

ಅಯೋಧ್ಯೆಯಲ್ಲಿ ರಾಮ ವನವಾಸಕ್ಕೆ ಹೋಗುವ ಸನ್ನಿವೇಶ ಸೃಷ್ಟಿಗೆ ಕೈಕೇಯಿಯ ಸ್ವಾರ್ಥ ಕಾರಣ ಅನ್ನುವುದಕ್ಕಿಂತ ಅದು ಭಿನ್ನ ಜೀವನಕ್ರಮ, ನೀತಿಯಿಂದ ಉದ್ಭವಿಸಿದ ಸಮಸ್ಯೆಯಾಗಿ ಇಲ್ಲಿ ಕಾಣುತ್ತದೆ. ರಾಜಪ್ರಭುತ್ವವಿರುವ ಪಿತೃಪ್ರಾಧಾನ್ಯವನ್ನು ನೆಮ್ಮಿಕೊಂಡಿರುವ ಅಯೋಧ್ಯೆಯ ನಿಯಮಗಳೇ ಬೇರೆ, ಹೆಣ್ಣುಮಕ್ಕಳಿಗೆ ಪ್ರಾಶಸ್ತ್ಯವಿರುವ ಕೇಕಯ ರಾಜ್ಯದ ನಿಯಮಗಳೇ ಬೇರೆ. ಅಲ್ಲಿಂದ ಬಂದ ಕೈಕೇಯಿಯ ಬೇಡಿಕೆ ಇಲ್ಲಿನ ನಿಯಮಗಳ ಹಿನ್ನೆಲೆಯಲ್ಲಿ ಒಪ್ಪಿತವಲ್ಲ. ಹೀಗಾಗಿ ಆಕೆ ಸಕಾರಣವಾಗಿ ತನ್ನ ಮಗ ರಾಜನಾಗಬೇಕು ಎಂದಾಗಲೂ ಅಯೋಧ್ಯೆಯ ಜನರ ಕಣ್ಣಲ್ಲಿ ಕ್ರೂರಿಯಾಗಿ ಕಾಣುತ್ತಾಳೆ. 'ಇದು ರಾಜಕೇಂದ್ರಿತ ರಾಷ್ಟ್ರ, ನಿನ್ನ ರಾಜ್ಯದ ನೀತಿ ಬೇರೆ, ಇಲ್ಲಿಯ ನೀತಿ ಬೇರೆ' ಎಂಬ ಮಾತುಗಳಲ್ಲಿ ಇದನ್ನು ಗುರುತಿಸಬಹುದು. ಪಿತೃಪ್ರಾಧಾನ್ಯ, ಮಾತೃಮೂಲೀಯ, ಕೃಷಿ ಪ್ರಧಾನ – ಹೀಗೆ ವಿವಿಧ ಬಗೆಯ ಜೀವನ ಕ್ರಮಗಳು, ಮೌಲ್ಯಗಳು ಜೊತೆಗೇ ಇದ್ದ ಸಂದರ್ಭವದು. ಈ ವೈವಿಧ್ಯವನ್ನು ಗಮನಿಸದೇ ಒಂದೇ ಮೌಲ್ಯದೃಷ್ಟಿಯಿಂದ ನೋಡಹೊರಟಾಗ ಆಗುವ ಮಿತಿ ಇದುವರೆಗಿನ ನಮ್ಮ ಗ್ರಹಿಕೆಗಳನ್ನು ನಿರ್ದೇಶಿಸುತ್ತಾ ಬಂದಿದೆ. ಭಿನ್ನ ಜೀವನದರ್ಶನದ ಮುಖಾಮುಖಿ, ಮನುಷ್ಯ ಸ್ವಭಾವದ ಸೂಕ್ಷ್ಮತೆ, ಜೀವನಶೈಲಿಯ ಭಿನ್ನತೆ ತಂದೊಡ್ಡುವ ಸಮಸ್ಯೆಗಳನ್ನು ಶೋಧಿಸುವ ಪ್ರಯತ್ನ ಈ ಕೃತಿಯಲ್ಲಿ ಕಾಣುತ್ತದೆ.

ರಾಮಾಯಣದ ಕಾಲ ಕ್ರಿ.ಪೂ. 5ರಿಂದ 7ರ ಆಸುಪಾಸು ಎಂದು ಅಂದಾಜು ಮಾಡಲಾಗಿದೆ. ಬುಡಕಟ್ಟುಗಳು, ವಿಭಿನ್ನ ಪಂಗಡಗಳನ್ನು ಏಕಚಕ್ರಾಧಿಪತ್ಯ ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳಲು ಹವಣಿಸುತ್ತಿದ್ದ ಕಾಲಘಟ್ಟ ಅದು. ಜೊತೆಗೆ ಅದು ಕಾಡುಗಳು, ಗುಡ್ಡಗಳು ಕೃಷಿಭೂಮಿಯಾಗಿ, ವಿಸ್ತರಣೆ ಪಡೆಯುತ್ತಿದ್ದ ಕಾಲವೂ ಹೌದು. ಇದುವರೆಗೆ ನಾವು ಗುರುತಿಸಿದಂತೆ ರಾಮಾಯಣ ಕೇವಲ ಪೌರಾಣಿಕ ಕಥೆಯಾಗಿ ಅಷ್ಟೇ ನಿಲ್ಲುವುದಿಲ್ಲ. ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳನ್ನು ಹೇಳುವ ಕೃತಿಯಾಗಿ ಇದಕ್ಕೆ ಮಹತ್ವವಿದೆ.

ಭರತ ರಾಜನಾಗಬೇಕೆಂಬುದು ಇಲ್ಲಿ, ಅವನ ತಾಯಿಯ ಅಪೇಕ್ಷೆಯೇ ಹೊರತು, ಅವನದಲ್ಲ. ವಾಸ್ತವವಾಗಿ ಈ ಬಗ್ಗೆ ಅವನ ನಿಲುವು ಏನು ಎಂಬುದನ್ನು ಕೇಳುವುದೂ ಇಲ್ಲ. ಪಾದುಕೆಯ ಪ್ರಕರಣವನ್ನು ಇಲ್ಲಿ ಸೂಕ್ಷ್ಮವಾಗಿ ರೂಪಕವಾಗಿ ತರಲಾಗಿದೆ. ವನವಾಸಕ್ಕೆ ಹೊರಟ ರಾಮನನ್ನು ಮರಳಿ ಕರೆದುಕೊಂಡು ಬರಲು ಭರತ ಹೋದಾಗ ಭರತನಿಗೆ ಮನಸ್ಸಿಲ್ಲದಾಗಲೂ, 'ರಾಜ್ಯವನ್ನು ಕಾಪಾಡಿಕೊಂಡು ಹೋಗು, ಇದು ರಾಜಾಜ್ಞೆ' ಎಂದು ರಾಮ ಆದೇಶಿಸುತ್ತಾನೆ. ಆಗ ಭರತನಿಗೆ ರಾಮ